ಈ ದಿನ ದಿನಾಂಕಃ05-01-2024 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರಃ ಶ್ರೀ ವೈ ಡಿ ಎಸ್ ವಕೀಲರ ಪರವಾಗಿ ಶ್ರೀ ಕೆ ಜಿ ಎಸ್ ವಕೀಲರಿಂದಃ**

ನಾನು ಖರೀದಿಸಿದ ದಾವಾಸ್ತಿಯ ಕ್ರಯಪತ್ರ ಮತ್ತು ಮ್ಯುಟೇಶನ್ ರಿಜಿಸ್ಟರ್ ಪ್ರತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ತಮ್ಮ ಪರವಾಗಿ ಹಾಜರುಪಡಿಸಿದ ದಾಖಲೆಗಳ ಪಟ್ಟಿಯನ್ನು ತೋರಿಸಲಾಗಿ ಸದರಿ ದಾಖಲೆಗಳ ಪಟ್ಟಿಯಲ್ಲಿ ಸದರಿ ಕ್ರಯಪತ್ರ ಮತ್ತು ಮ್ಯೂಟೇಶನ್ ಇಲ್ಲದೆ ಇರುವುದು ಖಚಿತಪಡಿಸಿಕೊಂಡಿರುತ್ತಾರೆ. ಅದೇ ರೀತಿ ನನ್ನ ಹೆಂಡತಿ ಹೆಸರಿಗೆ ಮಾಡಿದ ದಾನಪತ್ರ, ತಿದ್ದುಪಡಿ ಪತ್ರ ಮತ್ತು ಅದಕ್ಕೆ ಸಂಬಂಧಪಟ್ಟ ಮ್ಯೂಟೇಶನ್ ಪ್ರತಿಗಳನ್ನು ಹಾಜರುಪಡಿಸಿಲ್ಲಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ತಮ್ಮ ಪರವಾಗಿ ಹಾಜರುಪಡಿಸಿದ ದಾಖಲೆಗಳ ಪಟ್ಟಿಯನ್ನು ತೋರಿಸಲಾಗಿ ಸದರಿ ದಾಖಲೆಗಳ ಪಟ್ಟಿಯಲ್ಲಿ ಸದರಿ ಕ್ರಯಪತ್ರ ಮತ್ತು ಮ್ಯೂಟೇಶನ್ ಇಲ್ಲದೆ ಇರುವುದು ಖಚಿತಪಡಿಸಿಕೊಂಡಿರುತ್ತಾರೆ.

(ಸದರಿ ಸಮಯಕ್ಕೆ ವಾದಿಪರ ವಕೀಲರು ನ್ಯಾಯಾಲಯಕ್ಕೆ ದಿಃ13-10-2023 ರಂದು ದಾಖಲೆಗಳ ಪಟ್ಟಿಯನ್ನುಸಲ್ಲಿಸಿದ್ದು ಸದರಿ ದಾಖಲೆಗಳು ನಿಶಾನೆಗೆ ಒಳಪಟ್ಟಿರುವುದಿಲ್ಲ ಎಂಬುದನ್ನು ಖಚಿತಪಡಿಸಿಕೊಂಡಿರುತ್ತಾರೆ).

(ಮುಂದುವರಿದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು).

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಪಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.